‘ನಾಜೀಮಾ ಅವ್ರು ಬಿಟ್ಹೋದ್ರಾ...’ ಮನೆಯೊಂದರ ಕಟ್ಟೆಯ ಮೇಲೆ ಕೂರುತ್ತ. ಇನ್ನು ಕೆಲವೇ ನಿಮಿಷಗಳಲ್ಲಿ ಇಲ್ಲಿನ ಸಹವಾಸ ಇಡೀ ಜೀವನಕ್ಕೆ ಮುಗಿಸಿಕೊಂಡು ಬಿಡೋಣ ಎಂಬ ನಿರ್ಧಾರವಾಗಿತ್ತು. ನಿಟ್ಟುಬೀಳುವಂತೆ ಕುಕ್ಕರ್ ಸೀಟಿ ಹೊಡೆಯಿತು.

‘ಓ! ಅವ್ಳಾ, ಇದಾಳೆ ಇಲ್ಲೇ.’

ವೈಯಾರದ ಉತ್ತರ ಕೊಟ್ಟ ಹೆಂಗಸನ್ನು ದಿಟ್ಟಿಸಿದ. ನಾಜೀಮಾ ನಿನ್ನ ಕಳ್ಳವ್ಯವಹಾರ ನನಗೆ ಗೊತ್ತು ಎನ್ನುವ ಹಸಿಸುಳ್ಳು ಆ ಕಣ್ಣಲ್ಲಿ ಮಿನುಗಿತು. ಮಾತಿಗೆ ವಸ್ತು ಸಿಕ್ಕರೆ ಬಿಟ್ಟಾಳೆಯೇ... ಮುಂದುವರೆಸಿದಳು...

‘ಇನ್ನೂ ಮದ್ವೆ ಆಗಿಲ್ಲ! ಸೊರಗಿ ಸಣಕಲು ಕಡ್ಡಿ ಆಗಿದ್ದಾಳೆ. ಯಾರನ್ನೂ ಮಾತಾಡಿಸಲ್ಲ. ಗುರುತು ಹಿಡಿಯಲ್ಲ... ಹೋಗಿ ನೋಡು... ಹ್ಹಿ ಹ್ಹಿ. ಹಳೆ ನೆನಪು ಇದ್ರು ಇರಬೌದು!’

ವ್ಯಂಗ್ಯ ನಗುವಿಗೆ ಸಟ್ಟನೆ ತಿರುಗಿ ಉಕ್ಕಿಬರುವ ಕೊಳಕುಮಾತೆಲ್ಲ ಉಗಿವ ಅವಸರವನ್ನು ಒತ್ತಿಹಿಡಿದ. ‘ಯಾರನ್ನೂ ಗುರುತು ಹಿಡಿಯೊಲ್ಲ’ ಮಾತು ಹೆದರಿಸಿತು. ಅವಳ ನೋಡದೆ ಹೋಗುವಂತಿಲ್ಲ ಅಂದುಕೊಂಡ. ಮೆಲ್ಲಗೆ ಅವಳ ಮನೆಕಡೆ ನಡೆದ. ಮಾಸಿದ ಕರ್ಟನ್ನು ಗಾಳಿಗೆ ಅಲ್ಲಾಡಿತು. ಯಾಕೋ ಒಮ್ಮೇಲೆ ಮನಸ್ಸು ಹಿಂದೇಟು ಹಾಕಿತು. ಸುತ್ತಲಿನ ಜನರು ಅವಳಿಗಾಗಿಯೇ ಬಂದೆನೆಂದುಕೊಳ್ಳದಿರಲಿ ಎಂದು ಏನೆಲ್ಲ ನಾಟಕವಾಡಿದ್ದ.

ಬಾಗಿಲ ಮುಂದೆ ನಿಂತ. ತಟ್ಟಲೋ ಕರೆಯಲೋ... ಅವಳ ಹೆಸರಿಟ್ಟು ಕರೆಯಲಾದೀತೇ. ಅದೂ ಅಂತಹ ಪರಮಸುಂದರಿಯನ್ನ. ಎಷ್ಟು ಜನರ ನಿದ್ದೆ ಕೆಡಿಸಿದ್ದಳು ಆ ಕಾಲದಲ್ಲಿ. ಯಾರಿಗೂ ಒಲಿಯಲಿಲ್ಲವೆ...

‘ರೀ... ರೀ...’

‘.....’

ಪ್ರತ್ಯುತ್ತರವಿಲ್ಲದ್ದು ಅಸಹನೀಯ, ಅವಮಾನ ಎನಿಸತೊಡಗಿತು ಅವನಿಗೆ. ಯಾರೋ ಏನೋ ಮಾರಲು ಬಂದಿದ್ದಾರೆಂದು ಕೊಡವಿ ಬಿಟ್ಟರೆ... ಇದು ಲಾಸ್ಟ್ ಪ್ರಯತ್ನ.

‘ರೀ... ರೀ...’

‘ರೀ ರವಿ ಬರ್ರಿ ಒಳಗೆ. ಜೋರಾಗಿ ಕೂಗ್ಬೇಡ್ರಿ. ಜೊತೆಗೆ ಯಾರೂ ಇಲ್ಲ ತಾನೇ.’

ಹತ್ತು ಹದಿನೈದು ನಿಮಿಷದ ಪ್ರತಿಯೊಂದು ಸೆಕೆಂಡು ಎಣಿಸುತ್ತ ನಿಂತವನು ಮೂರೇ ಸೆಕೆಂಡಿನ ಅಂತರದಲ್ಲಿ ಮನೆಯೊಳಗೆ ಕೂರುತ್ತೇನೆ ಎಂದುಕೊಂಡಿರಲಿಲ್ಲ. ಕನಸಿನ ಸುಂದರಿ, ಕಣ್ಣೆದುರಿಗೆ ಸತ್ಯವಾಗಿ ನಿಂತಿದ್ದಳು. ಬಸ್ಸಿನಲ್ಲಿ

